ವಾರದ ಪತ್ರ

## ರಾಮನೂರಿನ ವೈಭವ ಸ್ಮರಣೀಯ

ಪುರಾಣ, ದಂತಕಥೆಗಳಲ್ಲಿ ಅಯೋಧ್ಯೆಗೆ ಇರುವ ಮಹತ್ವ ಅದು ರಾಮರಾಜ್ಯ ಅನ್ನುವುದು. ರಾಮ ಜನ್ಮಭೂಮಿ ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಿಸಿ ಸಾರ್ವಜನಿಕರ ದರ್ಶನಕ್ಕೆ ಮುಕ್ತ ಮಾಡಿದ್ದಾರೆ. ಅದರ ಇತಿಹಾಸ ತಿಳಿದುಕೊಳ್ಳುವ ಕುತೂಹಲ ಕಾಡುತ್ತಿರುವ ಹೊತ್ತಿನಲ್ಲಿ, ನ್ಯೂಸ್ ಫಸ್ಟ್ ವಾಹಿನಿ 'ರಾಮನೂರಿನ ರಾಜವೈಭವ' ಎನ್ನುವ ಕಾರ್ಯಕ್ರಮವನ್ನು ಪ್ರಸಾರ ಮಾಡಿತು. ಸೌಜನ್ಯ ವಸಿಷ್ಠ ಅವರ ನಿರೂಪಣೆ, ಶೆಲ್ವ ಪಿಳ್ಳೈ ಅಯ್ಯಂಗಾರ್ ಪ್ರವಚನ ಉತ್ತಮವಾಗಿ ಮೂಡಿಬಂತು.

—ವೀಣಾ ಶಂಕರ್, ಬೆಂಗಳೂರು

## ಮೋಹಿನಿಯ ಅಟ್ಟಹಾಸ



ಸ್ಟಾರ್ ಸುವರ್ಣದಲ್ಲಿ 'ದೃಷ್ಟಿ–2' ಆರಂಭವಾಗಿದೆ. ಈ ಧಾರಾವಾಹಿಯಲ್ಲಿ ನೈಜ ಅಂಶ ಇರದಿದ್ದರೂ ಪ್ರೇಕ್ಷಕರ ಮನ ಗೆಲ್ಲುವಲ್ಲಿ ಸಫಲವಾಗಿದೆ. ಇದರಲ್ಲಿ ಮೋಹಿನಿ ಆಗಲು ತನ್ನ ತಮ್ಮನನ್ನು ಬಲಿ ಕೊಡಲು ಮಧುಲಿಕಾ ಯೋಚಿಸಿದ್ದಾಳೆ. ಅದಕ್ಕೆ ಅಡ್ಡಲಾಗಿ ಇನ್ನೊಬ್ಬ ಮೋಹಿನಿ ವಿಶಾಲಾ ಆಗಮಿಸಿ ಆ ಹುಡುಗನನ್ನು ಕಾಪಾಡುತ್ತಾಳೆ. ಆ ಮನೆಯಲ್ಲಿ ಮಧುಲಿಕಾ ಯಾರೆಂಬ ಸತ್ಯ ಯಾರಿಗೂ ತಿಳಿದಿಲ್ಲ. ಒಟ್ಟಾರೆ ಧಾರಾವಾಹಿ ಚೆನ್ನಾಗಿದೆ.

—ಅನುಪಮಾ, ಚಿಕ್ಕಬಳ್ಳಾಪುರ

## ಭ್ರೂಣಹತ್ಯೆಗೆ ಪ್ರಚೋದನೆ ಆಗದಿರಲಿ

ಝೀ ಕನ್ನಡದ 'ಅಮೃತಧಾರೆ', 'ಪುಟ್ಟಕ್ಕನ ಮಕ್ಕಳು', 'ಶ್ರೀರಸ್ತು ಶುಭಮಸ್ತು', 'ಸತ್ಯ' ಈ ಎಲ್ಲಾ ಧಾರಾವಾಹಿಗಳಲ್ಲಿ ಏಕಕಾಲದಲ್ಲಿ ಗರ್ಭವತಿಯರ ಆರೈಕೆಯ ಸನ್ನಿವೇಶವನ್ನು ತಂದಿದ್ದಾರೆ. ಭ್ರೂಣಹತ್ಯೆಗೆ ಪ್ರಚೋದನೆ ಮಾಡುತ್ತಿಲ್ಲ ಎಂದು ಸಮರ್ಥಿಸುವ ಜೊತೆಗೆ ಭ್ರೂಣ ತೆಗೆಸುವ ಸನ್ನಿವೇಶವೂ ಬರುತ್ತದೆ. 'ಅಮೃತಧಾರೆ' ಮತ್ತು 'ಸತ್ಯ'ದಲ್ಲಿ ಅವಳ ಗಂಡ ಅಥವಾ ಪೋಷಕರ ಒಪ್ಪಿಗೆಯ ಪತ್ರ ಪಡೆಯದೇ ಅಬಾರ್ಷನ್ ಮಾಡಿಸುತ್ತಾರೆ.

'ಸತ್ಯ' ಮತ್ತು 'ಪುಟ್ಟಕ್ಕನ ಮಕ್ಕಳು' ಎರಡರಲ್ಲೂ ಮಾತು ಬಾರದ ಮಗುವನ್ನು ತೋರಿಸಿ ಕೆಲವೇ ದಿನದಲ್ಲಿ ಆ ಮಕ್ಕಳಿಗೆ ಮಾತು ಬರುತ್ತದೆ. ಏಕಮುಖ ಸನ್ನಿವೇಶ ಏಕರೂಪ ಕಥೆಯಿಂದ ಪ್ರೇಕ್ಷಕರಿಗೆ ಬೋರ್ ಹೊಡೆಯುತ್ತದೆ.

—ಮೇಘನಾ ರಘುನಂದನ್, ಹೂವಿನ ಹಡಗಲಿ

## ಹನುಮನ ಶಕ್ತಿ ಮತ್ತು ಭಕ್ತಿ

ಝೀ ಕನ್ನಡದ 'ಡ್ರಾಮಾ ಜೂನಿಯರ್'ನಲ್ಲಿ ಈಚೆಗೆ ಪ್ರಸಾರ ಮಾಡಿದ 'ಶ್ರೀ ರಾಮಾಂಜನೇಯ ಯುದ್ಧ' ಸನ್ನಿವೇಶ ತುಂಬಾ ಚೆನ್ನಾಗಿ ಮೂಡಿಬಂತು. ವಿಶ್ವಾಮಿತ್ರರ ಹೋಮಕ್ಕೆ ತೊಂದರೆ ಕೊಡಲು ಕಾಶಿ ರಾಜ ಚಂದ್ರಬಾನು ಬರುತ್ತಾನೆ. ಕುಪಿತನಾದ ಋಷಿ ಶಾಪ ಕೊಡಲು ಮುಂದಾದಾಗ, ಚಂದ್ರಬಾನು, ಹನುಮಂತನ ತಾಯಿ ಅಂಜನಾದೇವಿ ಬಳಿ ಕಾಪಾಡುವಂತೆ ಬೇಡಿಕೊಳ್ಳುತ್ತಾನೆ. ತನ್ನ ತಾಯಿಯ ಆದೇಶದಂತೆ ಆತನ ರಕ್ಷಣೆಗೆ ಹನುಮಂತ ಆಗಮಿಸುತ್ತಾನೆ. ಶ್ರೀರಾಮ, ಋಷಿಯ ಪರವಾಗಿ ಯುದ್ಧಕ್ಕೆ ನಿಲ್ಲುತ್ತಾನೆ. ಆಗ ಎದುರಾಳಿ ಹನುಮಂತ ರಾಮನ ಸ್ಮರಣೆ ಮಾಡುತ್ತಾನೆ. ರಾಮ ಅವನ ಭಕ್ತಿಗೆ ಮೆಚ್ಚಿ ರಾಜನನ್ನು ಮುಕ್ತಗೊಳಿಸುವ ಸನ್ನಿವೇಶವನ್ನು ಮಕ್ಕಳು ತುಂಬಾ ಚೆನ್ನಾಗಿ ಅಭಿನಯಿಸಿದರು.

—ಭಾರತೀ ಗಂಗಾಧರ್, ಬೆಂಗಳೂರು

## 'ಬಿಗ್ ಬಾಸ್' ನೀತಿ ಏನು?



ರಿಯಾಲಿಟಿ ಶೋಗಳಾದರೂ ಅದಕ್ಕೊಂದು ನಿರ್ದಿಷ್ಟ ಉದ್ದೇಶ ಮತ್ತು ಸಂದೇಶ ಇರಬೇಕು. ಜನಸಾಮಾನ್ಯರು ಮೆಚ್ಚಿಕೊಳ್ಳುವಂಥ ನೀತಿಯಿರಬೇಕು. ಆದರೆ ಕಲರ್ಸ್‌ನ 'ಬಿಗ್ ಬಾಸ್'ನಲ್ಲಿ ಇಂಥ ಯಾವುದೂ ಕಾಣಿಸುತ್ತಿಲ್ಲ. 'ಸ್ವಾರ್ಥ, ಮೋಸ, ಸ್ನೇಹ ವಂಚನೆ, ಒಬ್ಬರನ್ನು ತುಳಿದು ಬದುಕುವುದೇ ಕಾಣುತ್ತಿದ್ದೇವೆ' ಈ ಮಾತುಗಳನ್ನು ಸ್ಪರ್ಧಿಗಳೇ ಹೇಳಿದ್ದಾರೆ. ಮನರಂಜನೆಗೋಸ್ಕರ ನೋಡ ಬಯಸಿದರೆ ಅಲ್ಲಿರುವುದು ಬರೀ ಜಗಳ, ನಿಂದನೆಗಳು.

—ಪುಷ್ಪಾ ಎನ್.ಕೆ. ರಾವ್, ಉಡುಪಿ

## ಸ್ಪರ್ಧಿಗಳ ಆಯ್ಕೆಯ ಗುಟ್ಟು ಏನು?

ಕಲರ್ಸ್ ಕನ್ನಡದ 'ಬಿಗ್ ಬಾಸ್' ಸ್ಪರ್ಧೆಯಲ್ಲಿ ಭಾಗವಹಿಸಲು ಮಾನದಂಡವೇನು ಎನ್ನುವ ಜಿಜ್ಞಾಸೆ ಇತ್ತೀಚೆಗೆ ಕಾಡುತ್ತಿದೆ. ಸಾಮಾನ್ಯವಾಗಿ ನಟ–ನಟಿಯರೇ ಸ್ಪರ್ಧೆಯಲ್ಲಿ ಹೆಚ್ಚಿರುತ್ತಾರೆ. ಜಗಳಗಂಟರು, ಮಾತುಗಾರರು, ಕಿರಿಕಿರಿ ಮಾಡುವವರು, ಇಂಗ್ಲಿಷ್‌ನಲ್ಲಿ ಕನ್ನಡ ಮಾತನಾಡುವ ಹೈಫೈ ವಲಯದವರು ಹೆಚ್ಚಿರುತ್ತಾರೆ. ದಿನದ ಕೊನೆಗೆ ಅವರು ನೀಡಿದ ಸಂದೇಶ ಅವರಿಗಷ್ಟೇ ಅರ್ಥವಾಗಬೇಕು.

—ರಮಾನಂದ ಶರ್ಮಾ, ನವದೆಹಲಿ

## ಖಳನಾಯಕಿಯರ ಅಟ್ಟಹಾಸ

ಝೀ ಕನ್ನಡದ 'ಪಾರು', 'ಹಿಟ್ಲರ್ ಕಲ್ಯಾಣ', 'ಕೆಂಡ ಸಂಪಿಗೆ', 'ಪುಟ್ಟಕ್ಕನ ಮಕ್ಕಳು', 'ನಮ್ಮ ಲಚ್ಚಿ' ಧಾರಾವಾಹಿಗಳ ಕಥೆ ಹೇಗೆ ಪ್ರಾರಂಭ ಆಯಿತು ಅನ್ನೋದೇ ಮರೆತು ಹೋಗಿದೆ. ಅಷ್ಟರಮಟ್ಟಿಗೆ ಕಥೆಯನ್ನು ಎಳೆದಿದ್ದಾರೆ. ಉದ್ದಕ್ಕೂ ಸಾಲು ಸಾಲು ಖಳ ನಾಯಕಿಯರ ಅಬ್ಬರ, ಶಾಸ್ತ್ರಕ್ಕೆ ಎಂಬಂತೆ ಒಂದು ಉಪಕಥೆಯನ್ನು ಹೆಣೆದು ವರ್ಷಾನುಗಟ್ಟಲೆ ಪ್ರಸಾರ ಮಾಡುತ್ತಾರೆ. ಮುಗಿಯುವ ತನಕ ಮನೆ ಮನೆಯಲ್ಲೂ ಖಳನಾಯಕರ ಅಟ್ಟಹಾಸ ಮೆರೆಯುತ್ತಲೇ ಇರುತ್ತದೆ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಪ್ರತಿ ಹಾಡಿಗೂ ಅದರದೇ ಧಾಟಿ

ಝೀ ಕನ್ನಡದ 'ಸರಿಗಮಪ' ಸ್ಪರ್ಧೆಯ ಚಾಲೆಂಜ್ ರೌಂಡ್‌ನಲ್ಲಿ ಸಾಮಾನ್ಯವಾಗಿ ಈ ಹಿಂದೆ ಇಬ್ಬರು ಸ್ಪರ್ಧಿಗಳಿಗೆ ಒಂದೇ ಹಾಡನ್ನು ನೀಡುತ್ತಿದ್ದರು. ಆದರೆ ಈ ಬಾರಿ ಬೇರೆ ಬೇರೆ ಹಾಡುಗಳನ್ನು ನೀಡಿ ಚಾಲೆಂಜ್ ರೌಂಡ್ ಏರ್ಪಡಿಸಿದ್ದು ಸರಿ ಕಾಣಲಿಲ್ಲ. ಏಕೆಂದರೆ ಪ್ರತಿ ಹಾಡಿಗೂ ಅದರದೇ ಆದ ಸಾಹಿತ್ಯ, ಲಾಲಿತ್ಯ, ಧಾಟಿ ಇರುತ್ತದೆ. ಹಾಗಾಗಿ ಒಂದೇ ಗೀತೆಯನ್ನು ಕೊಟ್ಟಾಗ ಗಾಯನದ ವ್ಯತ್ಯಾಸವನ್ನು ಗುರುತಿಸಲು ಸಾಧ್ಯ.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ